ದಕ್ಷಿಣ ಕನ್ನಡ ಜಿಲ್ಲೆಯ ತೃತೀಯ ಲಿಂಗಿಗಳ ಒಂದು ಅಧ್ಯಯನ

A STUDY OF THE THIRD GENDER IN SOUTH KANARA DISTRICT

ಭವಿತವ್ಯದ ನಿರೀಕ್ಷೆ ಮತ್ತು ವಿಶ್ಲೇಷಣೆ:

ತೃತೀಯಲಿಂಗಿಗಳ/ಲಿಂಗತ್ವ ಅಲ್ಪಸಂಖ್ಯಾತರು, ಹಿಜ್ರಾಗಳ ಬದುಕು ಎರಡಲುಗಿನ ಕತ್ತಿ. ಇವರನ್ನು ಸಾಮಾಜಿಕ ಜಾತಿಭ್ರಷ್ಟರು (ಸೋಷಿಯಲ್ ಔಟ್ ಕಾಸ್ಟ್) ಎನ್ನುತ್ತಾರೆ, ರೋಶನ್ ದತ್ತಾ. ಇವರ ಬಗ್ಗೆ ನಿಖರವಾದ ಜನಗಣತಿ ದತ್ತಾಂಶಗಳಿಲ್ಲ. ಆದರೆ ಅವರ ಕುರಿತಂತೆ ಹೊಸ ಮನೋಭೂಮಿಕೆಯೊಂದು ರೂಪುಗೊಳ್ಳುತ್ತಿದೆ.

ಬಹುಚರ ಮಾತಾ ಹಿಂದೂ ದೇವತೆ. ಶಕ್ತಿ ದೇವತೆ, ಫಲವಂತಿಕೆಯ ದೇವತೆ. ಹಿಜ್ರಾ ಸಮುದಾಯದ ಅಧಿದೇವತೆ ಜತೆಗೆ ರಕ್ಷಕಿ. ಗುಜರಾತಿನ ಮೆಹಸನಾ ಜಿಲ್ಲೆಯ ಬೇಚರಾಜೀ ಪಟ್ಟಣದಲ್ಲಿದೆ ಈ ದೇವರ ದೇವಾಲಯ. ದೇವಿ ಹುಂಜದ ಮೇಲೆ ಕುಳಿತಿದೆ. ಹುಂಜ ಇಲ್ಲಿ ಮುಗ್ಧತೆಯ ಸಂಕೇತವಾಗಿದೆ. ಮೊದಲು ಈ ದೇವರನ್ನು ಹಿಜ್ರಾಗಳು ಮಾತ್ರ ಆರಾಧಿಸುತ್ತಿದ್ದರು . ಈಗ ಎಲ್ಲ ಸಮುದಾಯಗಳೂ ಈ ದೇವರನ್ನು ನಂಬುತ್ತವೆ. ಪ್ರಧಾನಿ ನರೇಂದ್ರ ಮೋದಿ ಅವರು ಕೂಡಾ ಬಹುಚರ ಮಾತೆಗೆ ಪೂಜೆ ಸಲ್ಲಿಸಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಹಿಜ್ರಾಗಳು ಇಂದು ವಿವಿಧ ರಂಗಗಳಲ್ಲಿ ಮುಂಚೂಣಿಗೆ ಬಂದು ದುಡಿಯುತ್ತಿದ್ದಾರೆ. ಅವರೆಲ್ಲ ಶ್ರಮ ಮತ್ತು ಅವಮಾನವನ್ನು ಎದುರಿಸಿ ಉನ್ನತ ಹುದ್ದೆಗೆ ಏರಿದವರು ಎಂಬುದು ಗಮನೀಯ. ಈಗ ಅವರ ಗಮನ ರಾಜಕೀಯ ಕ್ಷೇತ್ರದತ್ತಲೂ ಹರಿದಿದೆ. ಈಗ ಹೊಸದಾಗಿ ಕೇಳಿ ಬರುತ್ತಿರುವ ಘೋಷಣೆಗಳಲ್ಲಿ sಪ್ರಯೋಜನಕ್ಕಿಲ್ಲದ ರಾಜಕಾರಣಿಗಳನ್ನು ನಿವಾರಿಸಲು ಒಂದು ದಾರಿ ಇದೆ, ಹಿಜ್ರಾಗಳಿಗೆ ಮತ ಕೊಡಿ" ಎಂಬುದಕ್ಕೆ ಹೆಚ್ಚು ಬಲ ಸಿಗುತ್ತಿದೆ.

ಗೋರಖ್‌ಪುರದಲ್ಲಿ ಹಿಜ್ರಾ ಸಮುದಾಯದ ಆಶಾದೇವಿ ಮೇಯರ್ ಆಗಿದ್ದರು. ಕ್ರಿಸ್ತಶಕ 2000 ನೇ ಇಸವಿಯಲ್ಲಿ ಅವರು ಗೋರಖಪುರ ಮಹಾನಗರ ಪಾಲಿಕೆಯ ಮೇಯರ್ ಆದಾಗ ಹಿಜ್ರಾ ಸಮುದಾಯದ ಚರಿತ್ರೆಯಲ್ಲಿ ಹೊಸ ಪುಟ ತೆರೆಯಲ್ಪಟ್ಟಿತು. ಆದರೆ 2003ರಲ್ಲಿ ಅವರು ಸ್ಥಳೀಯ ನ್ಯಾಯಾಲಯದ ತೀರ್ಪಿನಿಂದಾಗಿ ಸ್ಥಾನ ಕಳೆದುಕೊಳ್ಳುವಂತಾಯಿತು. ಮೇಯರ್ ಹುದ್ದೆ ಮಹಿಳೆಗೆ ಮೀಸಲಾಗಿತ್ತು ಮತ್ತು ದೇವಿ ಮಹಿಳೆ ಅಲ್ಲ ಎಂಬ ಕಾರಣಕ್ಕೆ ಅವರನ್ನು ನ್ಯಾಯಾಲಯ ಅನರ್ಹಗೊಳಿಸಿತು.

2000 ದ ನವೆಂಬರ್ 25 ರಂದು ನಡೆದ ಚುನಾವಣೆಯಲ್ಲಿ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿ ದೇವಿ ಎದುರು ಸೋತಿದ್ದ ಸಮಾಜವಾದಿ ಪಕ್ಷದ ಅಂಜು ಚೌಧುರಿ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ಇತ್ಯರ್ಥಗೊಳಿಸಿದ ನ್ಯಾಯಾಲಯ 2003ರಲ್ಲಿ ಆ ತೀರ್ಪು ನೀಡಿತ್ತು. (ಪಿ.ಟಿ.ಐ. ಜೂನ್ 4, 2013) ಕಮಲಾ ಕತ್ನಿಯ ಮೇಯರ್ ಆಗಿದ್ದ ಇನ್ನೋರ್ವ ತೃತೀಯಲಿಂಗಿ. 2000 ದ ಚುನಾವಣೆಯಲ್ಲಿ ಈಕೆ ಆಯ್ಕೆಯಾಗಿದ್ದರು. sಕಾರಿಲ್ಲ, ಮನೆ ಇಲ್ಲ, ಕಮಲಾ ಎಲ್ಲರಿಗೆ ಸೇರಿದವರು" ಎಂಬುದು ಆಗ ಪ್ರಚಾರದ ಘೋಷಣೆಯಾಗಿತ್ತು. ಮಧ್ಯಪ್ರದೇಶದಲ್ಲಿ ಶಬ್ನಂ ಮೌಸಿ ಮೊದಲ ತೃತೀಯ ಲಿಂಗಿ ವಿಧಾನಸಭಾ ಸದಸ್ಯೆಯಾಗಿ ಆಯ್ಕೆಯಾಗಿದ್ದರು.

This PDF was created using the PDF CONVERTER Elite software
To remove this watermark, please license this product at www.pdfconverter.com

2003ರಲ್ಲಿ ಹಿಜ್ರಾಗಳು ಮಧ್ಯಪ್ರದೇಶದಲ್ಲಿ ತಮ್ಮದೇ ರಾಜಕೀಯ ಪಕ್ಷವನ್ನು ಕಟ್ಟಿಕೊಂಡಿದ್ದರು. ಅದರ ಹೆಸರು "ಜಿತೆ ಜಿತೇಯಿ ಪಾಲಿಟಿಕ್ಸ್" (ಜೆ.ಜೆ.ಪಿ.) 8 ಪುಟಗಳ ಚುನಾವಣಾ ಪ್ರಣಾಳಿಕೆಯನ್ನೂ ಅದು ಬಿಡುಗಡೆ ಮಾಡಿತ್ತು.

ರಾಜ್ಯದಲ್ಲಿ ತೃತೀಯಲಿಂಗಿಗಳ ನೀತಿಯನ್ನು ರಾಜ್ಯ ಸಚಿವ ಸಂಪುಟ ಅಂಗೀಕರಿಸಿದೆ. ತೃತೀಯಲಿಂಗಿಗಳನ್ನು ಅವಮಾನಿಸುವುದನ್ನು ತಡೆಯುವ, ಸಾಮಾಜಿಕ ಅಸಮಾನತೆಯನ್ನು ನಿವಾರಿಸುವ ನಿಟ್ಟಿನಲ್ಲಿ ತೃತೀಯಲಿಂಗಿಗಳಿಗೆ ಸಂಬಂಧಿಸಿದ ನೀತಿಗೆ 2017ರ ಅಕ್ಟೋಬರ್ 26, ಗುರುವಾರದಂದು ಕರಡು ರಚನೆಯಾದ ಮೂರು ವರ್ಷಗಳ ಬಳಿಕ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ.
ತೃತೀಯಲಿಂಗಿಗಳನ್ನು ಮುಖ್ಯವಾಹಿನಿಗೆ ತರುವುದು, ಅವರ ಜೀವನೋಪಾಯಕ್ಕೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡುವುದು ಸೇರಿದಂತೆ ಅವರ ಒಳಿತಿಗೆ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲು ತೃತೀಯಲಿಂಗಿಗಳ ಘಟಕವನ್ನು ಸ್ಥಾಪಿಸುವುದು ಈ ನೀತಿಯ ಮುಖ್ಯಾಂಶಗಳಲ್ಲಿ ಒಂದು.

ಸಾಮಾಜಿಕ ಕಳಂಕ ಎಂಬ ಭಾವನೆಯನ್ನು ತೊಡೆದುಹಾಕಲು, ಅಸಮಾನತೆಯನ್ನು ನಿವಾರಿಸಲು, ಅವರ ವಿರುದ್ಧದ ಹಿಂಸೆಗೆ ತಡೆ ಹಾಕಲು ಸಮಾಲೋಚನಾ ಕೇಂದ್ರಗಳ ಸ್ಥಾಪನೆ, ಜತೆಗೆ ಈಗ ತೀರಾ ಕಗ್ಗಂಟಾಗಿರುವ ಸಮಸ್ಯೆಯಾದ ಅವರನ್ನು ಗುರುತಿಸಿ ಪ್ರಮಾಣಪತ್ರ ನೀಡಲು ವ್ಯವಸ್ಥೆಯನ್ನು ರೂಪಿಸುವುದು ಈ ನೀತಿಯಲ್ಲಿದೆ.

ರಾಜ್ಯದ ತೃತೀಯಲಿಂಗಿಗಳ ನೀತಿ ಸುಪ್ರೀಂ ಕೋರ್ಟ್ 2014 ರ ಏಪ್ರಿಲ್ 15 ರಂದು ನೀಡಿದ ನಿರ್ದೇಶನಾನುಸಾರ ಇದೆ ಎನ್ನುವುದು ರಾಜ್ಯದ ಕಾನೂನು ಸಚಿವ ಟಿ.ಬಿ.ಜಯಚಂದ್ರ ಅವರ ಅಭಿಪ್ರಾಯ. ಎಲ್ಲಾ ರಾಜ್ಯಗಳಿಗೂ ಸುಪ್ರೀಂ ಕೋರ್ಟು ತೃತೀಯಲಿಂಗಿಗಳನ್ನು ರಕ್ಷಿಸಲು ನೀತಿಯನ್ನು ತರುವಂತೆ ನಿರ್ದೇಶನ ನೀಡಿತ್ತು. ಈ ನೀತಿಯನ್ನು ತೃತೀಯಲಿಂಗಿ ಸಂಘಟನೆ ಸ್ವಾಗತಿಸಿತ್ತು ಮತ್ತು "ಒಂದೆಡೆ"ಯ ಸ್ಥಾಪಕಿ ಅಕ್ಕೈ ಪದ್ಮಶಾಲಿ ಅವರು ತೃತೀಯಲಿಂಗಿಗಳಿಗಾಗಿ ಕಲ್ಯಾಣ ಮಂಡಳಿ ಅಥವಾ ಆಯೋಗವನ್ನು ಸ್ಥಾಪಿಸಬೇಕು ಎಂಬ ಒತ್ತಾಯ ಮಂಡಿಸಿದ್ದರು.

ತೃತೀಯಲಿಂಗಿಗಳು ಎದುರಿಸುತ್ತಿರುವ ಅಸುರಕ್ಷತೆಯ ಭಾವನೆ, ಆತಂಕ , ಆತ್ಮಹತ್ಯೆಯತ್ನದ ಮನೋಭಾವ, ಕಿರುಕುಳ ಮತ್ತು ದೌರ್ಜನ್ಯ ತಡೆಯ ಅಂಶಗಳನ್ನು ಹೊಂದಿರುವ ಈ ನೀತಿ ಶಿಕ್ಷಣದ ಎಲ್ಲಾ ಮಟ್ಟದಲ್ಲೂ ಮೀಸಲಾತಿ ಮತ್ತು ತೃತೀಯ ಸಮುದಾಯವನ್ನು ಸರ್ವ ಶಿಕ್ಷಾ ಅಭಿಯಾನದಲ್ಲಿ ಒಳಗೊಳಿಸುವಿಕೆ, ಆರ್.ಟಿ.ಇ.ಯಲ್ಲಿ ಸೇರಿಸಿಕೊಂಡು ಆ ಸಮುದಾಯದಲ್ಲಿ ಶಿಕ್ಷಣವನ್ನು ಹೆಚ್ಚಿಸುವ ,ಶಾಲೆ ತೊರೆಯುವುದನ್ನು ಕಡಿಮೆ ಮಾಡುವ ಅಂಶಗಳನ್ನು ಒಳಗೊಂಡಿದೆ. ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲು ಕಳಂಕ/ ಅಪಮಾನ, ಅಸಮಾನತೆ, ಲೈಂಗಿಕ ಕಿರುಕುಳ ಮತ್ತು ಹಿಂಸೆ ತಡೆಗೆ ಮೇಲುಸ್ತುವಾರಿ ಘಟಕ ರಚಿಸುವುದಕ್ಕೂ ಇದರಲ್ಲಿ ಸೂಚನೆಗಳಿವೆ.
ಈ ನೀತಿಯ ಉದ್ದೇಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ–

- ಲಿಂಗತ್ವ ಅಲ್ಪಸಂಖ್ಯಾತರನ್ನು ಗುರುತಿಸುವುದು
- ಸಮಾಜದ ಮುಖ್ಯವಾಹಿನಿಗೆ ಅವರನ್ನು ತರುವುದು.
- ಸರಕಾರಿ ಕಚೇರಿಗಳಲ್ಲಿ, ಸಾರ್ವಜನಿಕ ಸಂಸ್ಥೆಗಳಲ್ಲಿ ನಿರ್ಬಂಧ ಇಲ್ಲದೆ ಮುಕ್ತ ಅವಕಾಶ ಒದಗಣೆ
- ಕುಂದುಕೊರತೆಗಳ ನಿವಾರಣೆ
- ಮೂಲಭೂತ ಸೌಕರ್ಯಗಳ ಒದಗಣೆ–ಶಿಕ್ಷಣ, ನೀರು, ಆರೋಗ್ಯ, ಕಾನೂನು ಮತ್ತು ಇತರ
- ಜೀವನಾಧಾರಕ್ಕಾಗಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ.

This PDF was created using the PDF CONVERTER Elite software
To remove this watermark, please license this product at www.pdfconverter.com

- ಅವರ ಆರ್ಥಿಕ ಸ್ಥಿತಿ–ಗತಿ ಉತ್ತಮೀಕರಣ
- ಗೌರವದಿಂದ ಬದುಕಲು ಅವಕಾಶ.
- ಸಾಮಾಜಿಕ ಭದ್ರತೆ ಒದಗಿಸುವುದು

  ಬಹಳ ಮುಖ್ಯವಾಗಿ ಈ ನೀತಿ ಲಿಂಗತ್ವ ಅಲ್ಪ ಸಂಖ್ಯಾತರಿಗೆ ಸಮಾಲೋಚನಾ ಕೇಂದ್ರ /ಪುನರ್ವಸತಿ ಕೇಂದ್ರಗಳ ವ್ಯವಸ್ಥೆ ಮಾಡುವ ಅಂಶಗಳನ್ನು ಹೊಂದಿದೆ. ಸರಕಾರ ಆದೇಶ ಸಂಖ್ಯೆ: ಮಮಇ 16 ಮ.ಅ.ನಿ. 2014, ಬೆಂಗಳೂರು, ದಿನಾಂಕ:18.12.2017 ರನ್ವಯ **"**ಕರ್ನಾಟಕ ರಾಜ್ಯ ಟ್ರಾನ್ಸ್ ಜೆಂಡರ್ ನೀತಿ–2017**"**ನ್ನು ಜಾರಿಗೆ ತಂದಿದೆ.

This PDF was created using the PDF CONVERTER Elite software
To remove this watermark, please license this product at www.pdfconverter.com

ವ್ಯಾಪಕ ಪ್ರಚಾರದಿಂದ ಮತದಾನದ ಮಹತ್ವ ಮನದಟ್ಟಾಗಿದೆ

ತೃತೀಯ ಲಿಂಗಿಗಳ ಮುಖ್ಯವಾಹಿನಿಗೆ ತಂದ ಸ್ವೀಪ್

ಭಾರತದ ಪ್ರಜಾಪ್ರಭುತ್ವದ ಸೌಂದರ್ಯ ಇರುವುದು ಇಲ್ಲಿ ಎಲ್ಲರಿಗೂ ಲಭ್ಯ ಇರುವ ಮುಕ್ತ ಅವಕಾಶದಿಂದಾಗಿ. ರಾಜಕೀಯ ವ್ಯವಸ್ಥೆಯನ್ನು ಒಮ್ಮೆ ಅವಲೋಕಿಸಿದರೆ ಇಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿ ದೇಶದ ಆಡಳಿತದ ಚುಕ್ಕಾಣಿ ಹಿಡಿದ ಉದಾಹರಣೆಗಳು ಸಿಗುತ್ತವೆ. ಇದು ಸಾಧ್ಯವಾಗಿರುವುದು ಭಾರತದ ಚುನಾವಣಾ ವ್ಯವಸ್ಥೆಯಿಂದಾಗಿ. ಮನುಷ್ಯ ನಿರ್ಮಿತ ಆದರೆ ಶಾಶ್ವತ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿರುವ ಭಾರತದ ಸಂವಿಧಾನ ಒದಗಿಸಿರುವ ಮತದಾನದ ಹಕ್ಕು ಯಾರಲ್ಲೂ ಭೇದ ಮಾಡುವುದಿಲ್ಲ. ದೇಶದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಮತಕ್ಕೂ ರೈತನ ಮತಕ್ಕೂ ಒಂದೇ ಮೌಲ್ಯ. ಒಂದು ಮತದ ಅಂತರದಿಂದ ಗೆದ್ದರೂ ಅದು ಗೆಲುವೇ. ಒಂದು ಮತದ ಅಂತರದಿಂದ ಸೋತರೂ ಅದು ಸೋಲೇ. ಆ ಒಂದು ಮತ ಸಮಾಜದ ಯಾವ ವರ್ಗದಿಂದ ಬಂದಿದೆ, ಆ ವ್ಯಕ್ತಿಯ ಹುದ್ದೆ ಏನು ಎಂಬಿತ್ಯಾದಿ ಪ್ರವರಗಳು ಗಣನೆಗೆ ಬರುವುದಿಲ್ಲ. ಅಷ್ಟರ ಮಟ್ಟಿಗೆ ಸಮಾನತೆಯ ಗೆರೆಯನ್ನು ಸಂವಿಧಾನ ಬಹಳ ನೀಟಾಗಿ ಹಾಕಿದೆ.

ಭಾರತದ ಪ್ರಜಾತಂತ್ರ ವ್ಯವಸ್ಥೆಯ ಜೀವಾಳವಾದ ಪ್ರತಿನಿಧಿಗಳ ಆಯ್ಕೆಯಲ್ಲಿ ಜನರ ಸಹಭಾಗಿತ್ವದ ಪ್ರಮಾಣ ಕಡಿಮೆ ಆಗುತ್ತಿದೆ ಎಂಬ ಕಳವಳಕಾರಿ ಅಂಶದ ಹಿನ್ನೆಲೆಯಲ್ಲಿ ಭಾರತದ ಚುನಾವಣಾ ಆಯೋಗ ಸ್ವೀಪ್ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತಿದೆ. ಅರ್ಹ ಮತದಾರರನ್ನು ಮತಗಟ್ಟೆಗೆ ಬರುವಂತೆ ಮಾಡುವ ನಿಟ್ಟಿನ ಈ ಕಾರ್ಯಕ್ರಮ ಈಗ ಒಂದೊಂದು ಜಿಲ್ಲೆಗಳಲ್ಲಿ ಬಹಳ ಸೃಜನಶೀಲ ರೀತಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ. ಕರಾವಳಿಯಲ್ಲಿ ಇದಕ್ಕೆ ಯಕ್ಷಗಾನವನ್ನು ಬಳಸಿಕೊಳ್ಳಲಾಗಿದೆ. ದೋಣಿಗಳಲ್ಲಿ ತೆರಳಿ ಜಾಗೃತಿ ಅಭಿಯಾನ ಒಂದು ಉತ್ತಮ ಪರಿಕಲ್ಪನೆ. ಜತೆಗೆ ಮತದಾರರ ನೋಂದಣಿಗೆ ಕೈಗೊಂಡ ಮಿಂಚಿನ ನೋಂದಣಿ ಅಭಿಯಾನ ಮತದಾರರಿಗೆ ಒದಗಿಸಿಕೊಟ್ಟ ಒಂದು ಸುಲಭ ಬಳಕೆಯ ಅವಕಾಶ. ಈ ಸ್ವೀಪ್ ಈಗ ಸಮಾಜದ ಅಂಚಿನಲ್ಲಿರುವ ಮತ್ತು ತಮ್ಮದೇ ಸಮುದಾಯವನ್ನು ಕಟ್ಟಿಕೊಂಡು ಬದುಕುತ್ತಿರುವ ತೃತೀಯ ಲಿಂಗಿಗಳನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ಪರೋಕ್ಷವಾಗಿ ಮಾಡುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೃತೀಯ ಲಿಂಗಿಗಳ ಬಗ್ಗೆ ಅಧಿಕೃತ ಗಣತಿ ದತ್ತಾಂಶ ಲಭ್ಯವಿಲ್ಲ. ಅನೇಕರು ತಾವು ಇಂತಹ ವರ್ಗಕ್ಕೆ ಸೇರಿದವರೆಂದು ಸಾರ್ವಜನಿಕವಾಗಿ ಗುರುತಿಸಿಕೊಳ್ಳುವುದಕ್ಕೆ ಹಿಂಜರಿಯುತ್ತಿರುವುದು ಇದಕ್ಕೆ ಒಂದು ಕಾರಣ. ಆದರೆ ನಗರಗಳಿಗೆ ಬಂದು ಬದುಕುತ್ತಿರುವವರು ತಾವು ಗಂಡೂ ಅಲ್ಲ ಹೆಣ್ಣೂ ಅಲ್ಲ ಎಂದು ಸಾರ್ವಜನಿಕವಾಗಿ ಪ್ರಕಟಿಸಿಕೊಳ್ಳುವುದರ ಮೂಲಕ ತಮ್ಮದೇ ಸಮುದಾಯ ಕಟ್ಟಿಕೊಂಡಿದ್ದಾರೆ. ಈ ಸಮುದಾಯಕ್ಕೆ ಮತದಾರರ ಗುರುತಿನ ಚೀಟಿ ಒದಗಿಸುವುದಕ್ಕೆ ಇದ್ದ ದೊಡ್ಡ ತೊಡಕೆಂದರೆ ಅವರಿಗೊಂದು ಶಾಶ್ವತ ವಿಳಾಸ ಇಲ್ಲದಿರುವುದು. ಈ ಬಾರಿ ದಕ್ಷಿಣ ಕನ್ನಡ ಜಿಲ್ಲಾ ಸ್ವೀಪ್ ಸಮಿತಿ ಆರು ತಿಂಗಳು ಒಂದೇ ಸ್ಥಳದಲ್ಲಿ ವಾಸವಾಗಿರುವವರು ಮತದಾರರ ಗುರುತಿನ ಕಾರ್ಡ್ ಹೊಂದಲು ಅರ್ಹರು ಎಂಬ ನಿಯಮವನ್ನು ಅನ್ವಯಿಸಿಕೊಂಡು, ಅಧಿಕಾರಿಗಳು ತೃತೀಯ ಲಿಂಗಿಗಳು ವಾಸವಾಗಿರುವ ಬಾಡಿಗೆ ಮನೆಗಳು, ಲಾಡ್ಜ್‌ಗಳಿಗೆ ತೆರಳಿ ಅವರ ವಿಳಾಸ ದೃಢೀಕರಣ ನಡೆಸಿ ಮತದಾರರನ್ನಾಗಿ ನೊಂದಾಯಿಸಿಕೊಂಡಿದ್ದಾರೆ. ಇದರ ಪರಿಣಾಮ 45 ಮಂದಿ ತೃತೀಯ ಲಿಂಗಿಗಳು ಮುಖ್ಯವಾಹಿನಿಗೆ ಬರುವಂತಾಗಿದೆ.

ಚುನಾವಣಾ ಆಯೋಗ ಇಷ್ಟೆಲ್ಲ ಕಾರ್ಯಕ್ರಮಗಳನ್ನು ಕೈಗೊಂಡರೂ ಹಳ್ಳಿಗಳ ಮತದಾರರಷ್ಟು ನಗರಗಳ ಮತದಾರರು ಮತಗಟ್ಟೆಗೆ ಬರುವಲ್ಲಿ ಏಕೆ ಹಿಂದೇಟು ಹಾಕುತ್ತಾರೆ ಎಂಬುದರ ಬಗ್ಗೆ ಒಂದು ವ್ಯವಸ್ಥಿತ ಅಧ್ಯಯನ ಆಗಿಲ್ಲ. ಕರಾವಳಿ ಜಿಲ್ಲೆಗಳಲ್ಲಿ ಈ ಹಿಂದಿನ ಚುನಾವಣೆಗಳಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶಗಳಲ್ಲಿ ಶೇಖಡಾವಾರು ಹೆಚ್ಚಿನ ಪ್ರಮಾಣದ ಮತದಾನವಾಗಿರುವುದನ್ನು ಅಂಕಿಅಂಶಗಳು ಹೇಳುತ್ತಿವೆ. ಈ ಸ್ಥಿತಿಯನ್ನು ಬದಲಾಯಿಸುವ ನಿಟ್ಟಿನ ಹೆಜ್ಜೆಯೇ ಸ್ವೀಪ್, ಆರ್ಥಾತ್ ಮತದಾರರ ವ್ಯವಸ್ಥಿತ ಶಿಕ್ಷಣ ಮತ್ತು ಮತದಾನ ಪಾಲ್ಗೊಳ್ಳುವಿಕೆ. ಈ ಸ್ವೀಪ್ ತನ್ನ ಪ್ರಚಾರ ಸಾಮಗ್ರಿಗಳಲ್ಲಿ ತೃತೀಯ ಲಿಂಗಿಗಳ ಭಾವಚಿತ್ರಗಳನ್ನು ಬಳಸಿಕೊಳ್ಳುವ ಮೂಲಕ ಅವರ ಹಕ್ಕನ್ನು ಪ್ರಚುರಪಡಿಸಿದೆ. ಇದು ಈಗ ತೃತೀಯಲಿಂಗಿಗಳಲ್ಲಿ ತಮ್ಮ ಹಕ್ಕಿನ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ.

ವ್ಯಾಪಕ ಪ್ರಚಾರದಿಂದ ಮತದಾನದ ಮಹತ್ವ ಜನರಿಗೆ ಮನದಟ್ಟಾಗಿದೆ. ಪ್ರಮುಖ ಸ್ಥಳಗಳಲ್ಲಿ ಹಾಕಿರುವ ಮತದಾನದ ಮಹತ್ವ ಸಾರುವ ಫಲಕಗಳು ಆ ಹಾದಿಯಲ್ಲಿ ಸಾಗುವ ಸಾವಿರಾರು ಕಣ್ಣುಗಳ ಗಮನಕ್ಕೆ ಬರುತ್ತಿವೆ. ಈ ಬಾರಿ ಮತದಾನದ ಪ್ರಮಾಣ ಶೇ.75 ದಾಟಬೇಕು ಎಂಬ ಗುರಿಯನ್ನಿಟ್ಟುಕೊಂಡು ಸ್ವೀಪ್

ಅಭಿಮತ

■ ಡಾ। ನಾಗವೇಣಿ ಎನ್. ಮಂಚಿ

> ತೃತೀಯ ಲಿಂಗಿಗಳ ವಿಳಾಸ ದೃಢೀಕರಣವೇ ಅಧಿಕಾರಿಗಳಿಗೆ ದೊಡ್ಡ ಸಮಸ್ಯೆಯಾಗಿತ್ತು. ಈ ಬಾರಿ ಅವರ ಸಮುದಾಯದ ಸಂಘಟನೆಯು ಇಂತಹವರು ನಮ್ಮ ಸಂಘಟನೆಯ ಸದಸ್ಯರು ಎಂದು ಪತ್ರ ಕೊಟ್ಟರೆ ಅವರನ್ನು ಮತದಾರರ ಪಟ್ಟಿಯಲ್ಲಿ ನೊಂದಾಯಿಸುವ ಕ್ರಮವನ್ನು ಆಯೋಗ ಅಳವಡಿಸಿಕೊಂಡಿತು.

ಮತದಾರರ ಪ್ರಮಾಣ ಶೇ. 71.45 ಆಗಿತ್ತು. ನಗರ ಪ್ರದೇಶದಲ್ಲಿ ಬರೇ ಶೇ. 50 ಆಗಿತ್ತು.

ನಮ್ಮ ಚುನಾವಣಾ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಿರುವ ಓರ್ನಿಕ್ ಶಾನಿ ಎಂಬವರು ಭಾರತ ಹೇಗೆ ಪ್ರಜಾಪ್ರಭುತ್ವವಾದಿಯಾಯಿತು ಎಂಬ ಚರ್ಚೆಯನ್ನೆತ್ತಿಕೊಂಡು ಬರೆದಿರುವ ಪುಸ್ತಕ ಅನೇಕ ಆಸಕ್ತಿಯ ಅಂಶಗಳನ್ನು ಒಳಗೊಂಡಿದೆ. ಅವರು ಹೇಳುತ್ತಾರೆ ಭಾರತದ ಸಂವಿಧಾನ ಜಾರಿಗೆ ಬರುವುದಕ್ಕೆ ಮೊದಲೇ ಇಲ್ಲಿ ಮತದಾರರ ಕರಡು ಪಟ್ಟಿ ತಯಾರಾಗಿತ್ತು. ಆದ್ದರಿಂದ ಭಾರತೀಯರು ಮತದಾರರಾಗುವುದಕ್ಕೆ ಮೊದಲೇ ಪೌರರಾಗಿದ್ದರು (ಸಿಟಿಜನ್). ಚುನಾವಣಾ ಆಯೋಗವನ್ನೂ ಆಸ್ತಿತ್ವಕ್ಕೆ ಬಂದಿರದ ಆ ಕಾಲದಲ್ಲಿ ಮತದಾರರ ನೋಂದಣಿ ಜವಾಬ್ದಾರಿಯನ್ನು ಸಂವಿಧಾನ ರಚನಾ ಸಭೆಯ ಸಚಿವಾಲಯ ನಿರ್ವಹಿಸುತ್ತಿತ್ತು.

ಸ್ವತಂತ್ರ ಭಾರತದ ಮಹಿಳೆ ಇಂದು ತನ್ನ ಹೆಸರಿನಲ್ಲಿಯೇ ಮತದಾರರ ಚೀಟಿಯನ್ನು ಪಡೆಯುತ್ತಿದ್ದರೆ ಅದರ ಹಿಂದೆ ಸುದೀರ್ಘ ಪ್ರಯಾಣದ ಕಥೆ ಇದೆ. 1947ಕ್ಕೆ ಮೊದಲು ಹೆಣ್ಣು ಮಕ್ಕಳು ಇಂತಹವರ ಪತ್ನಿ ಅಥವಾ ಇಂತಹವರ ಮಗಳು ಎಂಬ ಹೆಸರಿನೊಂದಿಗೆ ಗುರುತಿಸಿಕೊಳ್ಳಬೇಕಾಗಿತ್ತು. ಪುರುಷಪ್ರಧಾನ ಆಡಳಿತದಲ್ಲಿದ್ದ ಈ ಸಂಪ್ರದಾಯ ಸ್ವಾತಂತ್ರ್ಯ ಸಿಕ್ಕಿದ ಬಳಿಕ ಬದಲಾಯಿತು. ಇಂತಹವರ ಪತ್ನಿ ಅಥವಾ ಮಗಳು ಎಂದು ಗುರುತಿಸಿಕೊಳ್ಳಬೇಕಾಗಿಲ್ಲ. ಅವರದೇ ಹೆಸರಿನಲ್ಲಿ ಅವರು ಮತದಾರರ ಪಟ್ಟಿಗೆ ನೊಂದಾಯಿಸಿಕೊಳ್ಳಬಹುದು ಎಂದು ಸರಕಾರ ಸಾರಿತು. ಆರಂಭದ ಹಂತದಲ್ಲಿ ವಯಸ್ಸು ಕೇಳಿಕೊಂಡು ದಾಖಲೆ ಮಾಡುವುದು ಸಮಸ್ಯೆಯಾಗಿತ್ತು. ಪ್ರಜಾಪ್ರಭುತ್ವದ ಹಾದಿ ಆ ಎಲ್ಲ ಅಡೆತಡೆಗಳನ್ನು ದಾಟಿ ಬಂದಿದೆ. ಈಗ ಗಂಡು ಮತ್ತು ಹೆಣ್ಣು ವರ್ಗದಲ್ಲಿ ಬಾರದ ತೃತೀಯ್ಯ ಲಿಂಗಿಗಳಿಗೆ ಪ್ರತ್ಯೇಕ ಕಾಲಂ ಸಮೂಡಿಸಿ ಮತದಾರರ ಗುರುತಿನ ಕಾರ್ಡ್ ನೀಡಿ ಅವರನ್ನು ಮುಖ್ಯವಾಹಿನಿಗೆ ಕರುವ ಪ್ರಯತ್ನ ಪ್ರಜಾಪ್ರಭುತ್ವವನ್ನು ಬಲಗೊಳಿಸುವ ನಿಟ್ಟಿನಲ್ಲಿ ಒಂದು ದೃಢ ಹೆಜ್ಜೆ.

ದಾಖಲೆ. ನಾನು ಈ ಬಾರಿ ಮತ ಚಲಾಯಿಸುತ್ತೇನೆ. ನನಗೆ 28 ವರ್ಷವಾಗಿದ್ದರೂ ಮತದಾನ ಮಾಡುತ್ತಿರುವುದು ಇದೇ ಮೊದಲು ಎಂದರು. ಹೊಸ ಮತದಾರರು ತಮ್ಮ ಹಕ್ಕನ್ನು ಚಲಾಯಿಸುವ ಬಗ್ಗೆ ಉತ್ಸುಕರಾಗಿರುತ್ತಾರೆ. ಅವರಿಗೆ ಇದೊಂದು ಹೊಸ ಜವಾಬ್ದಾರಿ. ಹೊಸದಾಗಿ ದೊರಕಿರುವ ಈ ಹಕ್ಕನ್ನು ಚಲಾಯಿಸಲು ಈ ಸಮುದಾಯ ಉತ್ಸುಕವಾಗಿದೆ.

ಈಗ ಲಭ್ಯ ಇರುವ ಅಂಕಿಅಂಶಗಳ ಪ್ರಕಾರ ಕರ್ನಾಟಕದ ಒಟ್ಟು ಮತದಾರರ ಸಂಖ್ಯೆ 4.96 ಕೋಟಿ ಈ ಪೈಕಿ ತೃತೀಯ ಲಿಂಗಿಗಳ ಸಂಖ್ಯೆ 4,552. 2013ರ ವಿಧಾನಸಭಾ ಚುನಾವಣೆಯಲ್ಲಿ ಈ ವರ್ಗದ ಮತದಾರರ ಸಂಖ್ಯೆ 2,100 (ಕರ್ನಾಟಕ ಚುನಾವಣಾ ಆಯೋಗ ಮಾ.27ರಂದು ಒದಗಿಸಿದ ಅಂಕಿ ಅಂಶ). ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2013ರ ಚುನಾವಣೆಯಲ್ಲಿ ತೃತೀಯ ಲಿಂಗಿಗಳೆಂದು ಗುರುತಿಸಿಕೊಂಡು ಮತದಾರರ ಕಾರ್ಡ್ ಪಡೆದವರು ಯಾರೂ ಇರಲಿಲ್ಲ. ಈ ಬಾರಿ 41 ಮಂದಿ ತೃತೀಯ ಲಿಂಗಿಗಳು ಮತದಾರರ ಪಟ್ಟಿಯಲ್ಲಿದ್ದಾರೆ. ಉಡುಪಿ ಜಿಲ್ಲೆಯಲ್ಲಿ 19 ಮಂದಿ ಈ ವರ್ಗದಲ್ಲಿ ನೊಂದಾಯಿಸಿಕೊಂಡಿದ್ದಾರೆ. ಅಂತಿಮ ಪಟ್ಟಿ ಪ್ರಕಟಗೊಳ್ಳುವಾಗ ಈ ಸಂಖ್ಯೆಗಳಲ್ಲಿ ಸ್ವಲ್ಪ ಪ್ರಮಾಣದ ಏರಿಕೆ ಆಗುವ ಸಾಧ್ಯತೆ ಇದೆ.

ಕಾರ್ಡ್ ನೀಡಲು ತೊಂದರೆ ಏಕು?

ತೃತೀಯ ಲಿಂಗಿಗಳಿಗೆ ಖಾಯಂ ವಾಸಸ್ಥಾನ ಎಂಬುದಿಲ್ಲ. ನಗರ ಪ್ರದೇಶಗಳಲ್ಲಿ ಅವರು ಗುಂಪಾಗಿ ಮನೆ ಗೃಹಗಳಲ್ಲಿ ವಾಸಿಸುತ್ತಾರೆ ಮತ್ತು ಅದನ್ನು ಆಗಾಗ ಬದಲಾಯಿಸುತ್ತಿರುತ್ತಾರೆ. ಇದರಿಂದ ಅವರ ವಿಳಾಸ ದೃಢೀಕರಣವೇ ಅಧಿಕಾರಿಗಳಿಗೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ಈ ಬಾರಿ ಅವರ ಸಮುದಾಯದ ಸಂಘಟನೆಯು ಇಂತಹವರು ನಮ್ಮ ಸಂಘಟನೆಯ ಸದಸ್ಯರು ಎಂದು ಪತ್ರ ಕೊಟ್ಟರೆ ಅವರನ್ನು ಮತದಾರರ ಪಟ್ಟಿಯಲ್ಲಿ ನೊಂದಾಯಿಸುವ ಕ್ರಮವನ್ನು ಆಯೋಗ ಅಳವಡಿಸಿಕೊಂಡಿತು. 'ಸರಕಾರದ ಮಟ್ಟದಲ್ಲಿ, ಆಯೋಗದ ಮಟ್ಟದಲ್ಲಿ ನಡೆದ ಈ ನಿರ್ಧಾರ ಲಿಂಗತ್ವ ಅಲ್ಪಸಂಖ್ಯಾತರು ಎದುರಿಸುತ್ತಿದ್ದ ಗುರುತಿನ ಕಾರ್ಡಿಗೆ ಸಂಬಂಧಿಸಿದ ದೊಡ್ಡ ತೊಡಕನ್ನು ನಿವಾರಣೆ ಮಾಡಿದೆ. ಹಾರ್ಮೋನುಗಳ ವ್ಯತ್ಯಾಸದಿಂದ ತಮ್ಮದಲ್ಲದ ತಪ್ಪಿಗಾಗಿ ಸಮಾಜದಿಂದ ಬಹಿಷ್ಕೃತರಂತೆ ಬದುಕುತ್ತಿರುವ ತೃತೀಯ ಲಿಂಗಿಗಳಿಗೆ ತಾವು ಭಾರತದ ಪೌರರು ಎಂದು ತೋರಿಸಲು ಈ ಗುರುತಿನ ಚೀಟಿ ನೆರವಾಗಲಿದೆ. ಜತೆಗೆ ಭವಿಷ್ಯದಲ್ಲಿ ಅವರಿಗೆ ಪ್ರತ್ಯೇಕ ಮೀಸಲಾತಿ ಪಡೆಯಲು ನೆರವಾಗಲಿದೆ. ತೃತೀಯ ಲಿಂಗಿಗಳ ಸಮುದಾಯ ತಮಗೆ ಮತದಾನದ ಹಕ್ಕು ಬೇಕು ಎಂದು ದಶಕಗಳ ಕಾಲ ಹೋರಾಟ ಮಾಡಿತ್ತು. 1994ರಲ್ಲಿ ಅವರಿಗೆ ಆ ಹಕ್ಕು ದೊರಕಿತು. ಈ ಸಮುದಾಯದ ಕಮ್ಲಾ ಜಾನ್ ಕತ್ತಿಯ ಮೇಯರ್ ಆಗಿದ್ದರೆ, ಶಬನಂ ಮೌಸಿ 2002ರಲ್ಲಿ ಮಧ್ಯಪ್ರದೇಶದ ಶಾಸಕರಾಗಿ ಆಯ್ಕೆಯಾಗಿದ್ದರು. ಬಳಿಕ ಹಲವೆಡೆ ತೃತೀಯ ಲಿಂಗಿಗಳು ಚುನಾವಣೆಗಳಲ್ಲಿ ಸ್ಪರ್ಧಿಸಿದರು. ಆಕಾದೇವಿ ಗೋರಖ್‌ಪುರದ ಮೇಯರ್ ಆದರು.ಕಲ್ಲು ಕಿನ್ನಾರ ವಾರಣಾಸಿಯ ನಗರ ಪರಿಷತ್ತಿಗೆ ಆಯ್ಕೆಯಾದರು. 2003ರಲ್ಲಿ ಮಧ್ಯಪ್ರದೇಶದ ತೃತೀಯ ಲಿಂಗಿಗಳು ತಮ್ಮದೇ ಆದ ಜೀತಿ ಜತಾಯ ಪಾಲಿಟಿಕ್ಸ್ (ಜೆ.ಜೆ.ಪಿ.) ಯನ್ನು ಸ್ಥಾಪಿಸಿಕೊಂಡರು.

ಸ್ವೀಪ್ ಜನರಲ್ಲಿ ರಾಜಕೀಯದ ಜವಾಬ್ದಾರಿಯನ್ನು ಮೂಡಿಸಿರುವಂತೆಯೇ ಸಮಾಜದ ಅಂಚಿನಲ್ಲಿದ್ದ ತೃತೀಯಲಿಂಗಿಗಳನ್ನು

(Seal)
issue of PAN card and now third gender is getting their PAN card